# ಭುವನೇಶ್ವರಿ

## I ಪದಗಳ ಅರ್ಥ

ಪದ = ಪಾದ, ಕಾಲುಗಳು
ಚರಿತೆ = ಇತಿಹಾಸ
ಸೊಬಗು = ಚೆಲುವು, ಅಂದ
ಮೆರೆ = ಖ್ಯಾತಿ ಹೊಂದು
ವೀರತಾಣ = ವೀರರ ಸ್ಥಳ
ಹಿರಿಮೆ = ಹೆಚ್ಚುಗಾರಿಕೆ
ಸಿರಿ = ಶ್ರೀ, ಸಂಪತ್ತು, ಚೆಲುವು
ವೈಭವ = ಐಶ್ವರ್ಯ
ಗರಿಮೆ = ಹಿರಿಮೆ
ಪತನ = ಅವನತಿ, ನಾಶ
ಶೀಘ್ರದಲ್ಲಿ = ಬೇಗನೆ, ಅಲ್ಪ ಸಮಯದಲ್ಲೇ
ಬೆರಗಾಗು = ವಿಸ್ಮಯ ಪಡು
ಸಿರಿಸಂಪದ = ಸಂಪತ್ತು
ದ್ರೋಹ = ಕೇಡನ್ನೆಣಿಸು, ವಿಶ್ವಾಸಘಾತ
ಸೆರೆ = ಬಂಧನ
ಅಂತಃಕಲಹ = ಒಳ ಜಗಳ
ಅಮರಿದರು = ಆಕ್ರಮಿಸು
ಚಳುವಳಿ = ಹೋರಾಟ
ತತ್ವ = ಸಿದ್ಧಾಂತ, ಸಾರಸತ್ವ
ಅಸಹಕಾರ = ಸಹಕರಿಸದಿರುವುದು
ಮೊಳೆತವು = ಚಿಗುರಿದವು
ವಿಶಾಲ = ವಿಸ್ತಾರವಾದ
ಉದಯ = ಮೂಡು, ಹುಟ್ಟು
ಪರಿ = ರೀತಿ
ಪಂಥ = ಮಾರ್ಗ, ಸಂಪ್ರದಾಯ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಚಿಮ್ಮು = ನೆಗೆ, ಬೀಸು
ಪೋಷಿಸು = ಕಾಪಾಡು, ಪೊರೆ

## ಅ) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (Answer the following questions)

೧. ಪಲ್ಲವರನ್ನು ಗೆದ್ದು ಮೆರೆದವರು ಯಾರು?
ಉ: ಪಲ್ಲವರನ್ನು ಗೆದ್ದು ಮೆರೆದವರು ಕದಂಬರು.
೨. ಬಾದಾಮಿಯಲ್ಲಿ ಆಳ್ವಿಕೆ ನಡೆಸಿದವರಾರು?
ಉ: ಬಾದಾಮಿಯಲ್ಲಿ ಆಳ್ವಿಕೆ ನಡೆಸಿದವರು ಚಾಲುಕ್ಯರು.
೩. ಯಾರ ಪತನದ ನಂತರ ವಿಜಯನಗರ ಬೆಳೆಯಿತು?
ಉ: ಹೊಯ್ಸಳರ ಪತನದ ನಂತರ ವಿಜಯನಗರ ಬೆಳೆಯಿತು.
೪. ಯುದ್ಧದಲ್ಲಿ ಆಂಗ್ಲರನ್ನು ಎದುರಿಸಿ ಗೆದ್ದವರು ಯಾರು?
ಉ: ಯುದ್ಧದಲ್ಲಿ ಆಂಗ್ಲರನ್ನು ಎದುರಿಸಿ ಗೆದ್ದವರು ಕಿತ್ತೂರು ರಾಣಿ ಚೆನ್ನಮ್ಮ.
೫. ಭಾರತ ಸ್ವಾತಂತ್ರ್ಯದ ಚಳವಳಿ ಯಾರ ತತ್ವದಲ್ಲಿ ಬೆಳೆಯಿತು?
ಉ: ಭಾರತ ಸ್ವಾತಂತ್ರ್ಯದ ಚಳವಳಿ ಗಾಂಧೀಜಿಯವರ ತತ್ವದಲ್ಲಿ ಬೆಳೆಯಿತು.
೬. ವಿಶಾಲ ಮೈಸೂರಿನ ಉದಯವಾದುದು ಯಾವಾಗ?
ಉ: ವಿಶಾಲ ಮೈಸೂರಿನ ಉದಯವಾದುದು ೧೯೫೬, ನವೆಂಬರ್ ೧ರಂದು.
೭. ನಮ್ಮ ನಾಡಿನಲ್ಲಿ ಯಾವುದು ಗೆಲ್ಲಬೇಕು? ಯಾವುದು ಬಾಳಬೇಕು?
ಉ: ನಮ್ಮ ನಾಡಿನಲ್ಲಿ ಕನ್ನಡ ಗೆಲ್ಲಬೇಕು? ಕನ್ನಡ ಬಾಳಬೇಕು.

## ಆ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿರಿ. (Complete the poem)

ಹೊಯ್ಸಳ ಪತನದ ನಂತರ ಬೆಳೆಯಿತು ವಿಜಯನಗರವತಿ ಶೀಘ್ರದಲ್ಲಿ ।
ಲೋಕವೆ ಬೆರಗಾಗುವ ಸಿರಿಸಂಪದ ಮೆರೆಯಿತು ಈ ಸಾಮ್ರಾಜ್ಯದಲಿ

ಯುದ್ಧದಿ ಆಂಗ್ಲರನೆದುರಿಸಿ ಗೆದ್ದಳು ಚನ್ನಮ್ಮನು ಕಿತ್ತೂರಿನಲ್ಲಿ |
ದ್ರೋಹಕೆ ಸೆರೆಯಾಗುತ ದಿನವನು ದೂಡಿದಳವಳು ಜೈಲಿನಲ್ಲಿ

ಹಿಂದೂ ಮುಸ್ಲಿಂ ಕ್ರೈಸ್ತ ಜೈನ ಬಸವೇಶ್ವರರ ಸಿರಿಪಂಥವಿದೆ |
ಕೊಂಕಣಿ ಉರ್ದು ತುಳುವಿನ ಸಂಸ್ಕೃತಿ ಕನ್ನಡತನ ಜಲ ಚಿಮ್ಮುತಿದೆ

"ಕನ್ನಡ ಗೆಲ್ಲಲಿ ಕನ್ನಡಬಾಳಲಿ" ನಮ್ಮೀ ಕನ್ನಡ ನೆಲದಲ್ಲಿ |
" ಕನ್ನಡ ಕಲಿಯಿರಿ ಕನ್ನಡ ಪೋಷಿಸಿ" ನಮ್ಮಯ ಕನ್ನಡನಾಡಿನಲಿ

## ಭಾಷಾಭ್ಯಾಸ

### ಅ) ಕೊಟ್ಟಿರುವ ಪದಗಳನ್ನು ಸೂಚನೆಯಂತೆ ಬದಲಾಯಿಸಿ. (Change as per the instructions given)

ಆಡಿದಳು - ಇದನ್ನು ವರ್ತಮಾನ ಕಾಲಕ್ಕೆ ಬದಲಿಸಿ - ಆಡುತ್ತಿದ್ದಾಳೆ
ನೋಡುವರು - ಇದನ್ನು ಏಕವಚನಕ್ಕೆ ಬದಲಿಸಿ - ನೋಡುವನು
ತಿಂದಿದ್ದು - ಇದರ ಮೂಲ ರೂಪ ಬರೆಯಿರಿ - ತಿನ್ನುವದು
ಬರುವುದು - ಇದನ್ನು ಭೂತಕಾಲಕ್ಕೆ ಬದಲಾಯಿಸಿ - ಬಂದಿತ್ತು

### ಆ) ಇವುಗಳ ಧಾತು ರೂಪ ಬರೆಯಿರಿ. (Write the verb form)

ಕುಣಿವಳು - ಕುಣಿ
ಕುಡಿಯಿತು - ಕುಡಿ
ಬರೆಗಳು - ಬರೆ
ಬಂದನು - ಬರು
ಹೋಗುವರು – ಹೋಗು

## ಕೃತಿಕಾರರ ಪರಿಚಯ

ಸತ್ಯವಿಠಲ ಅಂಕಿತದಿಂದ ಪ್ರಸಿದ್ಧರಾಗಿರುವ ಬಿ . ವಿ . ಸತ್ಯನಾರಾಯಣರಾವ್ ಅವರು ( ೧೯೪೪ ) ತುಮಕೂರು ಜಿಲ್ಲೆ ಶಿರಾ ತಾಲೂಕಿನ ಬುಕ್ಕಾಪಟ್ಟಣದವರು. ಮೆಕಾನಿಕಲ್ ಇಂಜಿನಿಯರಿಂಗ್ ಪದವೀಧರರಾದ ಇವರು ಪ್ರಕೃತ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಉಪಪ್ರಧಾನ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುವರು. ಗೀತ , ಸ್ತೋತ್ರ , ಕಾವ್ಯ , ಲಾವಣಿ , ಗದ್ಯ ಹೀಗೆ ವಿವಿಧ ಪ್ರಕಾರಗಳಲ್ಲಿ ಅರವತ್ತು ಕೃತಿಗಳನ್ನು ರಚಿಸಿದ್ದಾರೆ. ಹನ್ನೊಂದು

ಭಾಮಿನಿ ಕಾವ್ಯಗಳನ್ನೂ ಬಸವ ಭಾರತಿ ಸುದೀರ್ಘ ಲಾವಣಿ ಕಾವ್ಯವನ್ನೂ ಸಂಪೂರ್ಣ ದೇವೀ ಮಹಾತ್ಮ ಬಸವೇಶ್ವರ ಲೀಲಾ ವೈಭವಂ , ಲಂಕೇಶ್ವರ ಸೋಮನಾಥ ಚಾರಿತ್ರ ಮುಂತಾದ ಕಾವ್ಯಗಳನ್ನೂ ರಚಿಸಿದ್ದಾರೆ. ಕನ್ನಡ – ಸಂಸ್ಕೃತ ಭಾಷೆಗಳೆರಡರಲ್ಲೂ ಪಾಂಡಿತ್ಯವುಳ್ಳವರು. ಬಾಹುಬಲಿಚರಿತಂ, ಗಾಯತ್ರೀರಾಮಾಯಣ, ಸಿರಿಗನ್ನಡ ವೈಜಂತಿ, ಕನ್ನಡನಾಡ ಚರಿತ್ರೆ, ತತ್ವಭಾರತಿ, ಭಾವಗೀತೆಗಳು, ಶ್ರೀಶಿವಕುಮಾರಸ್ವಾಮಿಗುರುಚರಿತಂ, ಗುರುದತ್ತಚರಿತಂ ಇವರ ಪ್ರಮುಖ ಕೃತಿಗಳು ನೃತ್ಯರೂಪಕ ಹಾಗೂ ನಾಮಾವಳಿಗಳನ್ನು ರಚಿಸಿದ್ದಾರೆ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ